ಆದೇಶದ ಪ್ರಕಾರ ಪರಿಹಾರ ಕೊಡುವುದು ವಿಳಂಬವಾಗಿದೆ. ಇದರ ಬಗ್ಗೆ ಅನೇಕ ವಾದಗಳಿವೆ. ಆದಷ್ಟು ಬೇಗ ಪರಿಹಾರವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ಅಲ್ಲಿ ಕೆರೆಗಳು ಎಷ್ಟಿವೆ ?

ಶ್ರೀ ಬಿ. ಆರ್. ಯಾವಗಲ್.—ಐದು ಕೆರೆಗಳಿವೆ. ಕಂಂಟಿಸಿ, ನಾಗರಸಿಕೊಪ್ಪ, ಪಾರ್ವತಿ ಕೊಪ್ಪ, ಗೋಗೇರಿ ಈ ತರಹ ಐದು ಕೆರೆಗಳಿವೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ನಾಗೇಂದ್ರಘಡದ ಕೆರೆ ಕೂಡ ಇದೆ ಅದು ಬಿಟ್ಟು ಹೋಗಿದೆರ

ಶ್ರೀ ಬಿ. ಆರ್. ಯಾವಗಲ್.—ನಾಗೇಂದ್ರಘಡದ ಕೆರೆಯನ್ನು ಬಿಟ್ಟು ಬೇರೆ ಕೆರೆಗಳು ಫೈನಲ್ ಆಗಿವೆ. ಮಾನ್ಯ ಸದಸ್ಯರು ಹೇಳತಕ್ಕ ಕೆರೆಯ ಮಾಹಿತಿ ಇಲ್ಲ. ಮಾಹಿತಿಯನ್ನು ಕೊಟ್ಟರೆ ಅದ. ಬಗ್ಗೆ ಸರ್ಕಾರ ತೀವ್ರವಾಗಿ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ಎಸ್. ದೊಡ್ಡಮೇಟಿ.—ನಾನು ಸ್ವತಃ ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಗೆ ಹೋಗಿದ್ದೆ. ಅವರು ಏನು ಹೇಳುತ್ತಾರೆ ಅದು ಬಹಳ ವಿಷಾದದ ಸಂಗತಿ. ಫೈಲುಗಳು ಅಸಿಸ್ಟೆಂಟ್ ಕಮಿಷನರ್‌ರವರ ಕಛೇರಿಯಿಂದ ಸೆಕ್ರೆಟರಿಯೇಟ್‌ಗೆ ಹೋಗಿವೆಯೆಂದು ಹೇಳುತ್ತಾರೆ. ಸೆಕ್ರೆಟರಿಯೇಟ್‌ನಲ್ಲಿ ಕೇಳಿದರೆ ಅವರಿಗೆ ಕಳುಹಿಸಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಬಹುಶಃ ಆ ಫೈಲುಗಳು ಎಲ್ಲಿ ಹೋಗಿವೆಯೋ ಎನ್ನುವುದು ಅವರು ಹೇಳುವ ಮಾತಿನಿಂದ ಗೊತ್ತಾಗುತ್ತದೆ. ೀ ಸರ್ವೆ ಮಾಡುವ ಪ್ರಯತ್ನ ಮೊನ್ನೆ ಮೊನ್ನೆಯಿಂದ ನಡೆಯುತ್ತಿದೆ. ನಾಗೇಂದ್ರಘಡದ ಫೈಲುಗಳು ಎಲ್ಲಿ ಕಾಣೆಯಾಗಿವೆಯೋ ಗೊತ್ತಿಲ್ಲ. ಆ ಫೈಲುಗಳನ್ನು ಪತ್ತೆಹಚ್ಚುವ ಕೆಲಸವನ್ನು ಮೊದಲು ಆಗಬೇಕಾ.

ಶ್ರೀ ಬಿ. ಆರ್. ಯಾವಗಲ್.—ಈ ಪ್ರಕರಣದ ಬಗ್ಗೆ ವಿಚಾರ ಮಾಡಿ ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೨೪೮(೯೪೨) ಸದಸ್ಯರು ಹಾಜರಿಲ್ಲ, ಪ್ರಶ್ನೆ ನಂ. ೨೪೯(೨೮೮) ಸದಸ್ಯರು ಹಾಜರಿಲ್ಲ.

ಸಹಕಾರ ಇಲಾಖೆಯಲ್ಲಿ ನೇಮಕಾತಿಯ ಸೇವಾ ನಿಯಮಗಳು

೫೦. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ಸಹಕಾರ ಇಲಾಖೆಯ ಹುದ್ದೆ ಮತ್ತು ನೇಮಕಾತಿಯ ನಿಯಮಗಳ ಮಂಜೂರಾತಿಯು ಇನ್ನೂ ಬಾಕಿ ಇವೆಯೆ ?

ಬಿ) ಇದರ ಪರಿಣಾಮವಾಗಿ ನೌಕರರಿಗೆ ಬಡ್ತಿ ಕೊಡುವಾಗ ಏನಾದರೂ ತಾರತಮ್ಯ ಉಂಟಾಗಿದೆಯೇ ?

ಸಿ) ಈ ವಿಚಾರದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಯಾವುದಾದರೂ ರಿಟ್ ಅರ್ಜಿ ಹಾಕಲಾಗಿದೆಯೇ?

ಡಿ) ಹಾಗಿದ್ದರೆ, ಎಷ್ಟು ಬಾಕಿ ಉಳಿದಿವೆ ಹಾಗೂ ಎಷ್ಟು ನಿತ್ಯರ್ಥವಾಗಿವೆ ?

ಇ) ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾದ ಪ್ರಕರಣಗಳಲ್ಲಿ ಯಾವುದಾದರೂ ಕಾರ್ಯಗತವಾಗದೆ ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—

ಎ) ಸಹಕಾರ ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ ಸಿಬ್ಬಂದಿ ವರ್ಗದ ಮತ್ತು ನೇಮಕಾತಿ ನಿಯಮಾವಳಿಗಳು ಪುನರ್ ಪರಿಶೀಲನೆಯಲ್ಲಿವೆ.

ಬಿ) ಇಲ್ಲ.

ಸಿ) ಹೌದು.

ಡಿ) ಈ ರೀತಿಯ ರಿಟ್ ಅರ್ಜಿಗಳು ಒಟ್ಟು ೩೭ ಬಾಕಿ ಇರುತ್ತವೆ.

ಇ) ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಜಾಲಪ್ಪನವರಿಂದ ಈ ಉತ್ತರ ಬಂದಿರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಅವರು ಉತ್ತರದಲ್ಲಿ ೩೭ ರಿಟ್ ಅರ್ಜಿಗಳು ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆಯೆಂದು ಹೇಳಿದ್ದಾರೆ. ಇದಕ್ಕೆ ಮೊದಲೇ ಇನ್ನು ಎರಡ್ಮೂರು ತಿಂಗಳುಗಳಲ್ಲಿ ಪರಿಹಾರ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಈಗಿರತಕ್ಕ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಿಂದ ಕೆಲವರು ಅನ್ಯಾಯಕ್ಕೆ ಒಳಗಾಗಿದ್ದಾರೆ, ಕೆಲವರಿಗೆ ಪ್ರೊಮೋಷನ್ ಕೊಟ್ಟಿದ್ದಾರೆ. ಇದು ಈಗ ಕೊಟ್ಟಿರತಕ್ಕ ಉತ್ತರಕ್ಕೆ ತದ್ವಿರುದ್ಧವಾಗಿರುತ್ತದೆ. ತಾವು ಸಿನ್ಸಿಯರ್ ಆಗಿ ಕೆಲಸ ಮಾಡುತ್ತಿದ್ದೀರಿ ಎನ್ನುವ ಅನುಭವ ಇರುವುದರಿಂದ, ಈಗಲೂ ಈ ತಿಂಗಳ ಆಖೈರ್‌ನೊಳಗೆ ಕೇಡರ್ ಆಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಎಲ್ಲರಿಗೂ ನ್ಯಾಯ ಸಿಗುವಹಾಗೆ ಮಾಡುತ್ತೀರಾ ? ಅಥವಾ ಬೆಂಗಳೂರಿನ ಸುತ್ತಮುತ್ತ ಅಡ್ಡಾಡುವ ಜನರಿಗೆ ನ್ಯಾಯ ಸಿಗುವಹಾಗೆ ಮಾಡುವ ಇಚ್ಛಾ ನಿಮ್ಮಿದಾ ಇದೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ವಿಷಾದಿಸುತ್ತೇನೆ. ಇದು ೧೯೭೭ರಿಂದ ಸರ್ಕಾರದ ಮುಂದಿದೆ. ಇದು ಯಾವಾಗಲೂ ಆಗಬೇಕಾಗಿತ್ತು ನಮ್ಮ ಅಧಿಕಾರಿಗಳ ಸೋಮಾರಿತನದಿಂದ ಆಗಿಲ್ಲ. ಬೆಂಗಳೂರಿನವರಿಗೆ ಪ್ರೊಮೋಷನ್ ಕೊಡಬೇಕೆಂದೇನೂ ಇಲ್ಲ. ರಾಜ್ಯದ ಹಿತದೃಷ್ಟಿಯಿಂದ, ಇಲಾಖೆಯಲ್ಲಿ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಬೇಕೆನ್ನುವ ದೃಷ್ಟಿಯಿಂದ ಯಾರಿಗೆಯಾರಿಗೆ ಏನೇನು ಕೊಡಬೇಕೋ ಅದನ್ನು ಕೊಡುವುದು ಧರ್ಮ. ಮಾನ್ಯ ಸದಸ್ಯರು ಸೂಚಿಸಿರುವ ಹಾಗೆ ಒಂದು ಒಂದೂವರೆ ತಿಂಗಳಿನಲ್ಲಿ ಅದನ್ನು ಫೈನಲೈಸ್ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. ೨೫೧(೪೯೯) ಸದಸ್ಯರು ಹಾಜರಿಲ್ಲ

ಪ್ರಶ್ನೆ ನಂ. ೨೫೨(೫೪೮) ಸದಸ್ಯರು ಹಾಜರಿಲ್ಲ.

ಅಧಿಕಾರಿಗಳು ಮತ್ತು ಅಧಿಕಾರೇತರ ಸದಸ್ಯರನ್ನು ಸಹಕಾರ ಸಂಘಗಳಿಗೆ ನಿರ್ದೇಶಕರುಗಳನ್ನಾಗಿ ನೇಮಿಸುವ ಬಗ್ಗೆ.

೨೧೪. ಶ್ರೀ ವೀರಯ್ಯ ಸ್ವಾಮಿ (ಚಿಂಚೋಳಿ).— ಮಾನ್ಯ ಸಹಕಾರ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸಹಕಾರಿ ಸಂಘ ಸಂಸ್ಥೆಗಳಿಗೆ ಅಧಿಕಾರಿಗಳನ್ನು ಮತ್ತು ಅಧಿಕಾರೇತರ ಜನರನ್ನು ಆಡಳಿತ ಮಂಡಳಿಗಳಿಗೆ ನಾಮ ನಿರ್ದೇಶನ ಮಾಡುವುದಕ್ಕೋಸ್ಕರ ಸರ್ಕಾರ ಏನಾದರೂ ನಿಯಮಗಳನ್ನು ರಚಿಸಿದೆಯೇ ?

(ಆ) ಸರ್ಕಾರದಿಂದ ನಾಮ ನಿರ್ದೇಶಿತರಾದ ಡೈರೆಕ್ಟರುಗಳು ಸಹಕಾರಿ ಸಂಘಗಳ ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾತ್ರವಹಿಸುತ್ತಿರುವರೇ ? ಮತ್ತು ಇಂಥ ನಾಮ ನಿರ್ದೇಶನಗಳು ಸಹಕಾರ ಸಂಘಗಳಲ್ಲಿ ಚುನಾಯಿತ ಡೈರೆಕ್ಟರುಗಳ ಬಹುಮತವಿಲ್ಲದಿದ್ದರೂ ಸಹ ಕೆಲವು ರಾಜಕೀಯ ಪಕ್ಷಗಳಿಗೆ ಸಹಕಾರ ಸಂಘಗಳ ಅಧಿಕಾರ ಗಳಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ?

(ಇ) ಇದು ಅಸಂಸದೀಯ ಕ್ರಮವೆಂದು ಸರ್ಕಾರಕ್ಕೆ ಅನಿಸಂತಿಲ್ಲವೇ ? ಮತ್ತು ಇಂಥ ರೂಢಿಯನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳುವುದೇ ?